- -

**ಓ ಎಸ್ ನಂಃ 100/15**
**ಡಿ.ಡಬ್ಲ್ಯೂ - 01**
**ದಿನಾಂಕಃ 09.06.2026**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿಬಿಆರ್ ವಕೀಲರಿಂದಃ</u>**

ನಾನು ನನ್ನ ಕುಟುಂಬದ ಅಭಿವೃದ್ದಿಗೆ ಸ್ವತ್ತುಗಳನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಂದೆಯವರ ಯಾವುದೇ ಸ್ವತುಗಳನ್ನು ಮಾರಾಟ ಮಾಡಿರುವುದಿಲ್ಲ. ವಾದಿ ಪಾರ್ವತಮ್ಮನವರಿಗೆ ಹೊಸದುರ್ಗ ಟೌನ್‌ಗೆ ಸೇರಿದ ಅಸೆಸ್ಮೆಂಟ್ ನಂ. 1050 ರ ಪೈಕಿ ಪೂ-ಪ ಃ 30 ಉ-ದ 13 ಅಡಿ ಪೈಕಿ 7 ಅಡಿ ಉದ್ದದ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನೇ ನೀಡಿರುತ್ತಾರೆ ನುಡಿದಿರುತ್ತಾರೆ. ಸ್ಟ್ಯಾಂಪ್ ಡ್ಯೂಟಿಯನ್ನು ಉಳಿಸಲು ನನ್ನ ತಂದೆಯವರ ಮರಣ ಶಾಸನವನ್ನು ಮಾಡಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆಗೆ ಹಾಗೆ ಮರಣ ಶಾಸನವನ್ನು ಅವರ ಹೆಸರಿನಲ್ಲಿ ಸ್ವತ್ತು ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ ಎಂದರೆ ಸುಳ್ಳು. ಸದರಿ ಮರಣ ಶಾಸನ 90/93-94 ದಿಃ 26.04.1993 ರಂದು ನೊಂದಣಿ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಯಾವುದೇ ನೊಂದಣಿ ಮಾಡಿಕೊಟ್ಟಿರುವುದಿಲ್ಲ ಮತ್ತು ಸಹಿ ಹಾಕಿರುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿಯು ಹಾಕಿರುವಂತ ದಾವೆಯಲ್ಲಿನ ಸ್ವತ್ತುಗಳು ಒಟ್ಟು ಕುಟುಂಬದ ಪಿರ್ತಾಜಿತ ಸ್ವತ್ತುಗಳು ಎಂದರೆ ಸರಿ. ದಾವ ಸ್ವತ್ತುಗಳನ್ನು ವಾದಿ ಮತ್ತು ಪ್ರತಿವಾದಿಗೆ ಒಟ್ಟಾಗಿ ಅನುಭವಿಸುತ್ತಿದ್ದೇವೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಸಮಾನವಾದ ಹಕ್ಕು ಮತ್ತು ಅದಿಕಾರ ಇರುತ್ತದೆ ಎಂದರೆ ಸಾಕ್ಷಿಯು ವಾದಿಗೆ ಮತ್ತು ಇತರ ಇಬ್ಬರು ಸಹೋದರಿಯರಿಗೆ ಈಗಾಗಲೇ ನಾವು ಸ್ವತ್ತುಗಳನ್ನು ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ನಿಪಿ-14 ಕ್ಕೆ ಸಂಬಂಧಿಸಿದಂತೆ ಮೂಲ ದಾಖಲಾತಿಗೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಮತ್ತು ಅಧಿಕಾರ ಇದೆ ಎಂದರೆ ಸರಿಯಲ್ಲ. ವಾದಿಗೆ ಭಾಗವನ್ನು ನೀಡಬಾರದು ಎಂದು ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 2 ರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
**ನಾಯ್ಯಾಧೀಶರು, ಹೊಸದುರ್ಗ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೊಸದುರ್ಗ**

**ಪಿ ಸಿ ಆರ್ ನಂಬರ್**

**ದಿನಾಂಕ : 18-11-2025**

ನಿಶಾನೆಗೆ ಒಳಪಡಿಸಿದ ದಾಖಲೆಗಳು

| | | |
|---|---|---|
| ನಿಪಿ | 1 | ಆರೋಪಿಯ ಚೆಕ್ |
| ನಿಪಿ | 1(ಎ) | ಆರೋಪಿಯ ಸಹಿ |
| ನಿಪಿ | 2 | ಪಿರ್ಯಾದುದಾರರಿಗೆ ಬ್ಯಾಂಕ್ ರವರು ನೀಡಿದ ಹಿಂಬರಹ |
| ನಿಪಿ | 3 | ವಕೀಲರು ನೀಡಿರುವ ಲೀಗಲ್ ನೋಟೀಸ್ |
| ನಿಪಿ | 4 | ಅಂಚೆ ರಶೀದಿ |
| ನಿಪಿ | 5 | ತೆರೆದ ನ್ಯಾಯಾಲಯದಲ್ಲಿ ಜಾರಿಯಾಗದೇ ಬಂದ ಲಕೋಟೆಯನ್ನು ತೆಗೆದು ನೋಡಲಾಗಿ ಸದರಿ ಲಕೋಟೆಯನ್ನು ನಿಪಿ- ಎಂದು ಅದರಲ್ಲಿರುವ ನೋಟೀಸಿನ ಪ್ರತಿಯನ್ನು ನಿಪಿ5(ಎ) ಎಂದು ಗುರುತಿಸಲಾಯಿತು |

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
**ಜೆ ಎಂ ಎಫ್ ಸಿ ., ಹೊಸದುರ್ಗ**